Volume: 4 Issue: 4 Pages: 188-191

ಮಹಾತ್ಮ ಗಾಂಧೀಯವರ ನಿಧನದ ಸಂತಾಪ ಸೂಚಕ ಸಭೆಗಳು: ಮೈಸೂರು ರಾಜ್ಯ

*[1] ಡಾ.ಸುಂದ್ರೇಶ. ಎನ್

*[1] ಸಹಾಯಕ ಪ್ರಾಧ್ಯಾಪಕರು, ಮುಖ್ಯಸ್ಥರು, ಇತಿಹಾಸ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು,, ಬನ್ನೂರು, ಮೈಸೂರು

Article Info.
E-ISSN: 2583-6528
Impact Factor (SJIF): 6.876
Peer Reviewed Journal
Available online:
www.alladvancejournal.com

Received: 20/March/2025
Accepted: 25/April/2025

Abstract
ಮಹಾತ್ಮ ಗಾಂಧೀಯವರ ನಿಧನ ಇಡೀ ವಿಶ್ವಕ್ಕೆ ತುಂಬಲಾರದ ನಷ್ಟ ಜೊತೆಗೆ ಇಂತಹ ಮಹಾನ್ ಚೇತನ ನಿಧನಕ್ಕೆ ವಿಶ್ವವೇ ಕಂಬನಿ ಮಿಡಿದದ್ದು ಎಲ್ಲರಿಗೂ ತಿಳಿದ ವಿಷಯವೇ ಈ ನನ್ನ ಲೇಖನದ ಉದ್ದೇಶ ಈ ಮಹಾನ್ ಚೇತನವನ್ನು ನೆನೆದು ನಮ್ಮ ಮೈಸೂರು ರಾಜ್ಯ ಹಾಗೂ ಶ್ರೀಮನ್ಮಹರಾಜರಾದಿಯಾಗಿ ಶ್ರೀಸಾಮಾನ್ಯರು, ಸಂಘಸAಸ್ಥೆಗಳು, ಪ್ರತಿ ಜಿಲ್ಲೆಗಳಲ್ಲಿ ಕೂಡ ಸಂತಾಪವನ್ನು ವ್ಯಕ್ತಪಡಿಸಿದ್ದು ಮತ್ತು ವಿಶ್ವದಾದ್ಯಂತ ಅನೇಕ ಪ್ರಮುಖ ಪತ್ರಿಕೆಗಳು ತನ್ನ ಮುಖಪುಟಗಳಲ್ಲಿ ಮಹಾತ್ಮ ಗಾಂಧೀ ಕುರಿತು ಸಂತಾಪವನ್ನು ವ್ಯಕ್ತಪಡಿಸಿದವು ಅದನ್ನು ದಾಖಲಿಸುವ ಸಣ್ಣ ಪ್ರಯತ್ನವಾಗಿದೆ.

***Corresponding Author**
ಡಾ.ಸುಂದ್ರೇಶ. ಎನ್
ಸಹಾಯಕ ಪ್ರಾಧ್ಯಾಪಕರು,
ಮುಖ್ಯಸ್ಥರು, ಇತಿಹಾಸ ವಿಭಾಗ,
ಸರ್ಕಾರಿ ಪ್ರಥಮ ದರ್ಜೆ ಕಾಲೇಜು,,
ಬನ್ನೂರು, ಮೈಸೂರು

Keywords: ಶ್ರೀಮನ್ಮಹರಾಜರು ಮತ್ತು ಮನ್ಮಹಾರಾಣಿಯವರ ಭಾಷಣದ ತುಣುಕುಗಳು ವಿಶ್ವದ ಪ್ರಮುಖ ಪತ್ರಿಕೆಗಳ ಮುಖಪುಟಗಳ ಮುಖ್ಯಾಂಶಗಳು

Introduction

ಮಹಾತ್ಮ ಗಾಂಧೀಯವರ ಬದುಕೆ ಒಂದು ಮಹಾಕಾವ್ಯ ಅವರ ಬದುಕಿನ ರೀತಿ ನೀತಿ ಅತ್ಯಂತ ಕಲಾತ್ಮಕವಾದುದು. ಇವರ ಸಾಧನೆ ಸಿದ್ಧಿಗಳ ಬಗ್ಗೆ ಪ್ರಕಟವಾಗಿರುಷ್ಟು ಸಾಹಿತ್ಯ ಕೃತಿಗಳು ಜಗತ್ತಿನ ಬೇರಾವ ವ್ಯಕ್ತಿಯ ಕುರಿತು ಪ್ರಕಟವಾಗಿಲ್ಲವೆಂದರೂ ಅತಿಶಯೋಕ್ತಿಯಾಗಲಾರದು. ಗಾಂಧೀಜಿ ಅವರು ಕೇವಲ ದೇಶದ ರಾಷ್ಟ್ರ ನಿರ್ಮಾಪಕರಾಗಿರಲಿಲ್ಲ ಎಲ್ಲಕಿಂತ ಮಿಗಿಲಾಗಿ ಅವರು ರಾಷ್ಟ್ರೀಯ ಭಾವೈಕ್ಯದ ಸಂಕೇತವಾಗಿದ್ದರು.

"ನಾವು ಹಿಂಸೆಯ ಕೈವಾಡದಲ್ಲಿ ಸಿಲುಕಿ ನಾಶವಾಗದಿರಬೇಕಾದರೆ ನಾವು ಮಹಾತ್ಮ ಗಾಂಧೀಯವರು ಯಾವ ಧ್ಯೇಯಕ್ಕಾಗಿ ಬಾಳಿದರೋ, ಮಡಿದರೋ ಆ ಧ್ಯೇಯದಿಂದ ಮಾತ್ರ ಸಾಧ್ಯ "ಎಂದುಗ ಸರ್. ಸರ್ವಪಲ್ಲಿ ರಾಧಾಕೃಷ್ಣರವರು ಹೇಳಿರುವಂತೆ ಇಡೀ ವಿಶ್ವಕ್ಕೆ ಶಾಂತಿ ಮಂತ್ರದ ಮೂಲಕ ಮನೆಮಾತಾದ ಮಹಾನ್ ಚೇತನರ ನಿಧನ ಬರಸಿಡಿಲಂತೆ ಬಂದದ್ದು ಆಶ್ಚರ್ಯವೇ ಸರಿ ಜೊತೆಗೆ ತುಂಬಲಾರದ ನಷ್ಟವಾಗಿದ್ದು. ಸರ್ದಾರ್ ಪಟೇಲರು ಹೇಳಿರುವಂತೆ "ಮಹಾತ್ಮ ಗಾಂಧೀಯವರು ಯಾವಾಗಲೂ ನಮ್ಮೊಂದಿಗೆ ಇದ್ದೇ ಇರುತ್ತಾರೆ. ಯಾಕೆಂದರೆ ಅವರ ಭೋದನೆಗಳು, ಆದರ್ಶಗಳೂ ನಮ್ಮ ಮುಂದೆ ಇವೆ. ಅವರ ದೇಹ ಬೂದಿಯಾದರೂ ಅವರ ಆತ್ಮ ಎಂದೆAದಿಗೂ ನಮ್ಮೊಂದಿಗೆ ಇರುತ್ತದೆ. ಆತ್ಮ ಅವಿನಾಶಿ"ಎಂದು ಹೇಳಿದ್ದಾರೆ.೨ ನನ್ನ ಲೇಖನದ ಮುಖ್ಯ ಉದ್ದೇಶ ಇಡೀ ಜಗತ್ತು ಮಹಾತ್ಮ ಗಾಂಧೀಯವರ ನಿಧನಕ್ಕೆ ಕಂಬನಿ ಮಿಡಿದು ಸಂತಾಪ ಸೂಚಿಸಿದ್ದು ಗಮನಿಸಿದ್ದೇವೆ. ಅದೇ ಮಾದರಿಯಲ್ಲಿ ಮೈಸೂರು ರಾಜ್ಯದಲ್ಲಿಯೂ ಮಹಾತ್ಮ ಗಾಂಧೀಯವರ ನಿಧನದ ಬಗ್ಗೆ ಸಂತಾಪ ಸೂಚಕ ಸರಣಿ ಸಭೆಗಳು, ಮೈಸೂರಿನ ವಿವಿಧ ಸಂಘಟನೆಗಳು, ತಾಲೂಕುಗಳು, ಮೈಸೂರು ಸರ್ಕಾರಿ ಗೆಜೆಟ್‌ನಲ್ಲಿ ರಜೆ ಘೋಷಣೆ ಮಾಡಿದ್ದು ಮತ್ತು ವಿಶೇಷವಾಗಿ ಶ್ರೀಮನ್ಮಹಾರಾಜರು, ಶ್ರೀಮನ್ಮಹಾರಾಣಿಯವರು ಸಂತಾಪ ಸೂಚಿಸಿದ್ದನ್ನು ದಾಖಲು ಮಾಡುವ ಮತ್ತು ವಿಶ್ವದ ಪ್ರಮುಖ ಪತ್ರಿಕೆಗಳ ಮುಖಪುಟದ ಹೆಡ್‌ಲೈನ್‌ನನ್ನು ಕೇಂದ್ರೀಕರಿಸಿ ದಾಖಲಿಸುವ ಪ್ರಯತ್ನವನ್ನು ಈ ಲೇಖನದಲ್ಲಿ ಮಾಡಿದ್ದೇನೆ.

ಮುಖ್ಯಾಂಶಗಳು

- ಶ್ರೀಮನ್ಮಹಾರಾಜರಾದ ಶ್ರೀ ಜಯಚಾಮರಾಜ ಒಡೆಯರ್ ರವರ ಭಾಷಣ
- ಶ್ರೀಮನ್ಮಹಾರಾಣಿಯವರಾದ ಶ್ರೀ ತ್ರಿಪುರಸುಂದರಮ್ಮಣ್ಣಿರವರ ಭಾಷಣ
- ಮೈಸೂರಿನ ವಿವಿಧ ಸಂಘಟನೆಗಳು, ತಾಲೂಕುಗಳಲ್ಲಿ ನಡೆದ ಸಂತಾಪ ಸೂಚಕ ಸಭೆಗಳು ಮತ್ತು ಮೆರವಣಿಗೆಗಳು
- ಮೈಸೂರು ರಾಜ್ಯದ ಸರ್ಕಾರಿ ಗೆಜೆಟ್‌ನಲ್ಲಿ ರಜೆ ಘೋಷಣೆ
- ವಿಶ್ವದ ಪ್ರಮುಖ ಪತ್ರಿಕೆಗಳ ಮುಖಪುಟದ ಹೆಡ್‌ಲೈನ್ ಗಳು.

ಶ್ರೀಮನ್ಮಹಾರಾಜರಾದ ಶ್ರೀ ಜಯಚಾಮರಾಜ ಒಡೆಯರ್‌ರವರ ಭಾಷಣ

ಶ್ರೀಮನ್ಮಹಾರಾಜರಾದ ಶ್ರೀ ಜಯಚಾಮರಾಜ ಒಡೆಯರ್ ರವರು ಒಲಂಪಿಕ್ ಮೈದಾನದಲ್ಲಿ ಮಹಾತ್ಮ ಗಾಂಧೀಯವರ ನಿಧನದ ಬಗ್ಗೆ ಮತ್ತು ಅವರ ಆತ್ಮಕ್ಕೆ ಶಾಂತಿಕೋರಲು ಸಾರ್ವಜನಿಕ ಸಭೆಯಲ್ಲಿ ಅಧ್ಯಕ್ಷತೆವಹಿಸಿ ಭಾಷಣ ಮಾಡಿದರು. ಮೈದಾನದಲ್ಲಿ ಮಹಾತ್ಮರ ಸುಂದರವಾದ ಪ್ರತಿಮೆಯನ್ನು ಅಲಂಕರಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ಮತ್ತೊಂದು ವಿಶೇಷವವೆಂದರೆ ಕಾರ್ಯಕ್ರಮದಲ್ಲಿ ಬೈಬಲ್, ಗೀತೆ ಮತ್ತು ಕುರಾನ್‌ನ ಪಠಣಗಳಿಂದ ಪ್ರಾರಂಭವಾಗಿದ್ದು ನಂತರ ಶ್ರೀಮನ್ಮಹಾರಾಜರು ಭಾಷಣ ಪ್ರಾರಂಭಿಸಿದರು……ಭಾಷಣದ ಮುಖ್ಯಾಂಶವೆAದರೆ…" ಸತ್ಯ, ಶಾಂತಿ ಮತ್ತು ಅಹಿಂಸಾತತ್ವರಾದ ಮಹಾತ್ಮಾ ಗಾಂಧೀಯವರು ಘೋರ ಅಪಮೃತ್ಯುವಿಗೆ ತುತ್ತಾದರು. ವಿಧಿ ಲೀಲೆ ಅವರ ಕೊಲೆಯು ಹೇಯವಾದುದು, ಭಾರತೀಯ ಘನತೆ ಗೌರವಗಳ ಮೇಲ್ಮೆಗಾಗಿ ಇವರ ಮಟ್ಟಿಗೆ ಯಾರು ಶ್ರಮಿಸಿಲ್ಲ, ಮಹಾತ್ಮ ಗಾಂಧೀಯವರು ಮೈಸೂರಿನ ರಾಜಮನೆತನದವರ ಬಗ್ಗೆ ಇಟ್ಟಿದ್ದ ಪ್ರೀತಿ ವಿಶ್ವಾಸಗಳ ಬಗ್ಗೆ ನಾವು ಹೆಮ್ಮೆಪಡಬೇಕಾಗಿದೆ. ಅವರ ನಿಧನದಿಂದ ನಮ್ಮ ದುಃಖಕ್ಕೆ ಮೇರೆ ಇಲ್ಲದಂತಾಗಿದೆ. ಅವರ ಬಗ್ಗೆ ಚಿರಸ್ಮರಣೀಯವಾದ ಸ್ಮಾರಕವನ್ನು ಸ್ಥಾಪಿಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ."ಇ

ಈ ಕಾರ್ಯಕ್ರಮವನ್ನು ರಾಜಧಾನಿಯ ಪ್ರಜೆಗಳು ರಾಷ್ಟ್ರೀÀರಯ ಶೋಕ ದಿನಾಚರಣೆಯಾಗಿ ಆಚರಿಸಿ ಎಲ್ಲಾ ಸಂಸ್ಥೆಗಳವರು ಅಂಗಡಿ, ಹೋಟೆಲ್, ಸರ್ಕಾರಿ ನೌಕರರೂ ಸಂಪೂರ್ಣ ಹರತಾಳವನ್ನು ಆಚರಿಸಿ ರಾಷ್ಟ್ರೀರಯ ಶೋಕಾಚರಣೆಯಲ್ಲಿ ಭಾಗವಹಿಸಿದ್ದರು. ಸುಮಾರು ಮೂರು ಮೈಲಿಗೂ ಮೀರಿ ಮೆರವಣಿಗೆ ಇದ್ದು ಕಾರ್ಯಕ್ರಮದಲ್ಲಿ ಸುಮಾರು ೪ ರಿಂದ ೫ ಲಕ್ಷ ಮಂದಿ ಪ್ರೇಕ್ಷಕರು ಆಗಮಿಸಿದ್ದರು.

ಶ್ರೀಮನ್ಮಹಾರಾಣಿಯವರಾದ ಶ್ರೀ ತ್ರಿಪುರಸುಂದರಮ್ಮಣ್ಣಿರವರ ಭಾಷಣ

ಮಹಾತ್ಮ ಗಾಂಧೀಯವರ ನಿಧನದ ಸ್ಮರಣಾರ್ಥ ಗೌರವ ಸೂಚಿಸಲು ೧೯೪೮ ಫೆಬ್ರವರಿ ೧೨ ರಂದು ಗುರುವಾರ ಶ್ರೀಮನ್ಮಹಾರಾಣಿಯವರ ಅಧ್ಯಕ್ಷತೆಯಲ್ಲಿ "ಮಹಿಳಾ ಸಂತಾಪ ಸೂಚಕ ಸಭೆ" ನಡೆದಿದ್ದು ಅದರಲ್ಲಿ ಶ್ರೀಮನ್ಮಹಾರಾಣಿಯವರು ಮಹಾತ್ಮಾ ಗಾಂಧೀಯವರು ದೇಶಕ್ಕಾಗಿ ಮಾಡಿದ ತ್ಯಾಗ, ಬಲಿದಾನ ಮತ್ತು ಮಹಿಳೆಯಯರ ಮೇಲಿನ ಕುರಿತು ಹೊಂದಿದ್ದ ಅಪಾರ ಗೌರವವನ್ನು ವ್ಯಕ್ತಪಡಿಸಿದರು. ಈ ಕೆಳಗಿನಂತೆ ಅವರು ಹೃದಯಾಂತರಾಳದಿAದ ಮಾತುಗಳಾನ್ನಾಡಿದರು.

"ಸೋದರಿಯರೇ,……

ಬಹಳ ವಿಷಾದಕರವಾದ ಸಮಯದಲ್ಲಿ ನಾವೆಲ್ಲರೂ ಈ ದಿನ ಇಲ್ಲಿ ಸೇರಿದ್ದೇವೆ. ನಮ್ಮ ದೇಶದ ಶೇಷ್ಠ ನಾಯಕರಾದ ಮಹಾತ್ಮಾ ಗಾಂಧಿಯವರು ಕಾಲವಶರಾದ ನಿಮಿತ್ತವಾಗಿ ನಮ್ಮ ಸಂತಾಪವನ್ನು ಸೂಚಿಸುವುದಕ್ಕಾಗಿ, ನಾವು ಸಭೆ ಸೇರಿದ್ದೇವೆ. ಪ್ರಪಂಚದಲ್ಲಿ ಈಚೆಗೆ ಅವತರಿಸಿದ ಅತ್ಯಂತ ಶ್ರೇಷ್ಠ ನಾಯಕರಲ್ಲಿ ಮಹಾತ್ಮಾ ಗಾಂಧಿಯವರು ಒಬ್ಬರಾಗಿದ್ದಾರೆ. ಅವರನ್ನು ಭಾರತೀಯ ಜನಾಂಗದ ತಂದೆಯೆAದು ಕರೆದಿರುವುದು ಯುಕ್ತವಾಗಿಯೇ ಇದೆ. ಅವರು ದೀನರಲ್ಲಿಯೂ, ದರಿದ್ರರಲ್ಲಿಯೂ: ಕರುಣೆಯುಳ್ಳವರಾಗಿದ್ದರು. ಅಲ್ಲದೆ ಜೀವನದ ನಾನಾ ಸ್ಥಾನಮಾನಗಳ ಸಮಸ್ತ ಕಾರ್ಯಕ್ಷೇತ್ರಗಳಲ್ಲಿಯೂ, ಅವರು ಸ್ತ್ರೀರಯರಿಗೂ ಮತ್ತು ಪುರುಷರಿಗೂ ಆಲೋಚನೆ ಹೇಳಿ ಸಲಹೆಗಳನ್ನು ನೀಡುತ್ತಿದ್ದರು. ಅಂಥವರು ಈಗ ನಮ್ಮನ್ನು ಅಗಲಿ ಹೋಗಿದ್ದಾರೆ. ಅವರು ಇನ್ನೂ ದೀರ್ಘಕಾಲ ಜೀವಿಸಿದ್ದು ಪೂರ್ಣ ಗೌರವದೊಡನೆ ಮರಣಹೊಂದಿದ್ದರೂ, ನಾವು ಸಂತಾಪ ಪಡುತ್ತಿದ್ದೆವು. ನಾವು ಅಮೂಲ್ಯವೆಂದು ಭಾವಿಸಿದ್ದ ಮಹಾತ್ಮರ ಆಲೋಚನೆಯ ಸಲಹೆಗಳೂ ಲಭಿಸಿದಂತಾಯಿತಲ್ಲಾ ಎಂದು. ಆಗಲೂ ನಾವೆಲ್ಲರೂ ಪೇಚಾಡುತ್ತಿದ್ದೆವು. ಈಗಲಾದರೋ, ನಮ್ಮ ದೇಶದ ಸ್ಥಿತಿಯು ಇನ್ನೂ ಸ್ತ್ರೀಮಿತಕ್ಕೆ ಬರಬೇಕಾಗಿದೆ: ಪರಿಸ್ಥಿತಿಯು ಇನ್ನೂ ಪ್ರಶಾಂತವಾಗಿಲ್ಲ. ಇಂಥ ಸನ್ನಿವೇಶವಿರುವಾಗ ಅವರು ಮೃತಪಟ್ಟರೆಂದು ನಮಗೆ ಅಪಾರವಾಗಿ ವಿಷಾದವುಂಟಾಗಿದೆ. ಅವರಿಗೆ ಮರಣ ಸಂಭವಿಸಿದ ರೀತಿಯಿಂದಲAತೂ, ನಮ್ಮ ವಿಷಾದವೂ ಮತ್ತೂ ಹೆಚ್ಚಾಗಿದೆ.

ಮಹಾತ್ಮಾ ಗಾಂಧಿಯವರು ಮಾಡಿರತಕ್ಕ ಉಪಕಾರಕ್ಕಾಗಿ ಭಾರತ ದೇಶದ ಮಹಿಳೆಯರಾದ ನಾವು ಮಾತ್ರವೇ ಅಲ್ಲದೇ, ಒಟ್ಟು ಪ್ರಪಂಚದ ಮಹಿಳೆಯರೆಲ್ಲರೂ ಅವರಿಗೆ ವಿಶೇಷ ಕೃತಜ್ಞರಾಗಿರಬೇಕಾಗಿದೆ. ಮತ್ತು ಅವರಿಗೆ ಪ್ರಾಪ್ತವಾದ ಹಿಂಸಾತ್ಮಕವಾದ ಮರಣಕ್ಕಾಗಿ ಬಹಳವಾಗಿ ಶೋಕಪಡಬೇಕಾಗಿದೆ. ಅವರು ಉಪದೇಶಿಸಿದ ಅಹಿಂಸಾ ತತ್ವವನ್ನು ಮಹಿಳೆಯರಲ್ಲಿ ಪ್ರತಿಯೊಬ್ಬರು ವಿಶೇಷ ಅಮೂಲ್ಯವಾದುದನ್ನಾಗಿ ಭಾವಿಸಿರುತ್ತಾರೆ. ಮಹಿಳೆಯರಲ್ಲಿ ಪ್ರತಿಯೊಬ್ಬರಿಗೂ ಅಹಿಂಸೆಯು ಸಹಜ ಸಿದ್ಧವಾಗಿ ಅವರ ಅಭ್ಯಾಸದಲ್ಲದೆ. ಪರಹಿಂಸೆಯೂ ಮತ್ತು ಕ್ರೂರ ಯುದ್ಧಗಳೂ ನಡೆಯದಂತೆ ಅವುಗಳನ್ನೂ ತಡೆಗಟ್ಟಬೇಕಾದುದೂ ಅವಶ್ಯಕ: ಪರರಲ್ಲಿ ಸಹಿಷ್ಣುತೆಯನ್ನು ತೋರಿಸುವುದು. ಪರಸ್ಪರ ಸೌಹಾರ್ದದಿಂದಿರುವುದು ಮತ್ತು ಶಾಂತಿ ನೆಲೆಗೊಂಡಿರುವAತೆ ಮಾಡುವುದು. ಇವು ಮಾನವರ ಕಲ್ಯಾಣಕ್ಕಾಗಿ ಭಗವಂತನೂ ವಿಧಾಯಕ ಮಾಡಿರುವ ಸನ್ಮಾರ್ಗಗಳಾಗಿವೆ. ಎಂದು ನಮ್ಮ ದೇಶದ ಮಹಿಳೆಯರೂ ಮತ್ತು ಪ್ರಪಂಚದ ಇತರ ಎಲ್ಲಾ ದೇಶಗಳ ಮಹಿಳೆಯರೂ ಸರ್ವದಾ ಭಾವಿಸುತ್ತಾ ಬಂದಿದ್ದಾರೆ. ಶ್ರೇಷ್ಠವಾದ ಈ ತತ್ವವನ್ನು ನಿಸ್ಸಂದೇಹವಾಗಿ ಸಂತತವೂ ಲೋಕಕ್ಕೆ ಉಪದೇಶಿಸಿರತಕ್ಕ ಮಹಾನುಭಾವರುಗಳಲ್ಲಿ, ಮಹಾತ್ಮಾ ಗಾಂಧೀಯವರೂ ಒಬ್ಬರು, ಮಾನವ ಕುಲವು ನಾಶಹೊಂದದAತೆ ಅದು ರಕ್ಷಿತವಾಗಬೇಕಾದರೆ, ಮಹಾತ್ಮಾ ಗಾಂಧಿಯವರು ಯಾವ ತತ್ವಗಳಿಗಾಗಿ ತಮ್ಮ ಪ್ರಾಣವನ್ನು ಅರ್ಪಿಸಿದರೋ ಆ ತತ್ವಗಳನ್ನೂ ಪಾಲಿಸಬೇಕೆಂದು ಅವರು ಸಾರಿರತಕ್ಕ ಸಂದೇಶವನ್ನು ಸಮಸ್ತರೂ ಅನುಸರಿಸಿ ವರ್ತಿಸುವರೆಂದು ನಾವು ನಂಬಿದ್ದೇವೆ."

ನಮ್ಮ ದೇಶದ ಪ್ರಸಿದ್ಧ ಮಹಿಳೆಯರು ಗ್ರಹಿಸಿ ಅನುಸರಿಸಿದ್ದ ಪ್ರಾಚೀನಕಾಲದ ಶ್ರೇಷ್ಠವಾದ ವರ್ತನೆಗಳನ್ನು ಮಹಾತ್ಮಾ ಗಾಂದಿಯವರು ಮಹಿಳೆಯರಿಗೆ ಭೋದಿಸುತ್ತಿದ್ದರು. ಇದಕ್ಕಾಗಿ ನಾವು ಅವರಿಗೆ ಎಂದೆAದಿಗೂ ಕೃತಜ್ಞರಾಗಬೇಕಾಗಿದೆ. ಗ್ರಾಮಾಂತರ ಪ್ರದೇಶಗಳಲ್ಲಿರುವ ನಮ್ಮ ಸೋದರಿಯರ ವಿದ್ಯಾಬ್ಯಾಸಕ್ಕಾಗಿಯೂ ಮತ್ತು ಅವರ ಸ್ಥಿತಿಯನ್ನು ಉತ್ತಮಪಡಿಸುವುದಕ್ಕಾಗಿಯೂ "ಕಸ್ತೂರ್ ಬಾ ಸ್ಮಾರಕ ನಿಧಿ "ಯ ಮೊಬಲಗು ವೆಚ್ಚವಾಗಬೇಕೆಂದು ಮಹಾತ್ಮಾ ಗಾಂದೀಯವರು ವ್ಯವಸ್ಥೆ ಮಾಡಿದ್ದರು. ಮಹಿಳೆಯರಾದ ನಮ್ಮ ಹಿತಸಾಧನೆಯಲ್ಲಿ ಅವರಿಗಿದ್ದ ಆಸಕ್ತಿಯೆಷ್ಟೆಂಬುದು

ಅದರಿಂದ ಗೊತ್ತಾಗುತ್ತದೆ. ಅವರು ತಮ್ಮ ಜೀವಿತ ಕಾಲದಲ್ಲಿ ನಮ್ಮೆಲ್ಲರ ಗೌರವ ವಿಶ್ವಾಸಗಳನ್ನು ಗಳಿಸಿದ್ದುದಲ್ಲದೆ, ನಮ್ಮ ಸ್ಥಿತಿಯನ್ನು ಮೊದಲಿದ್ದುದಕಿಂತಲೂ ಉತ್ತಮಗೋಳಿಸುವುದಕ್ಕಾಗಿ ಯತ್ನಿಸಿದರು. ಹೀಗೆ ನಮ್ಮ ಏಳಿಗೆಯನ್ನು ಸಾಧಿಸಲು ಪ್ರಯತ್ನಿಸುತ್ತಿದ್ದ ಮಹಾತ್ಮರೆಂದು, ನಾವು ಎಂದೆAದಿಗೂ ಅವರನ್ನೂ ಸ್ಮರಿಸುತ್ತಿರುತ್ತೆವೆ. ಅವರು ಉದಾತ್ತ ತತ್ವಗಳನ್ನು ಭೋದಿಸಿದ್ದಾರೆ. ಮುಖ್ಯವಾಗಿ ಪರಸಹಿಷ್ಣುತೆ ಮತ್ತು ಸೌಹಾರ್ದ ಇವೆರಡನ್ನೂ ಭೋದಿಸಿರುವುದಲ್ಲದೆ, ಅವುಗಳಿಗಾಗಿ ತಮ್ಮ ಪ್ರಾಣವನ್ನೆ ಒಪ್ಪಿಸಿದರು. ಮಹಾತ್ಮಾ ಗಾಂಧೀಯವರ ಉದಾತ್ತವಾದ ಬೋಧನೆಗಳನ್ನು ಅನುಸರಿಸಿ ನಡೆಯುವುದೆ ಅವರ ಸವಿನೆನಪಿಗಾಗಿ ನಾವು ಏರ್ಪಡಿಸಬಹುದಾಗಿರುವ ಅತ್ಯುತ್ತಮವಾದ ಸ್ಮಾರಕವಾಗಿದೆ.೪

ಮೈಸೂರಿನ ವಿವಿಧ ಸಂಘಟನೆಗಳು, ತಾಲೂಕುಗಳಲ್ಲಿ ನಡೆದ ಸಂತಾಪ ಸೂಚಕ ಸಭೆಗಳು ಮತ್ತು ಮೆರವಣಿಗೆಗಳು

- ಮಹಾತ್ಮರ ಬಗ್ಗೆ "ಷಾಂಘೈ ವಿಶ್ವವಿದ್ಯಾನಿಲಯದ ಪೀಟಿಲು ಅಧ್ಯಾಪಕ ಜರ್ಮನ್ ಗಾಯಕ ಪ್ರೊಫೆಸರ್ ಪಾಲ್ ಎರ್ಡೆನ್ ಷಾನ್ ಎಂಬುವರು ಮಹಾತ್ಮಾರ ಸ್ಮಾರಕ ಗೀತೆಯೊಂದನ್ನು ರಚಿಸಿ ಭಾರತಕ್ಕೆ ಕಳುಹಿಸಿದ್ದರು."೫
- ನಂಜನಗೂಡು ತಾಲೂಕು ದೇವನೂರಿನಲ್ಲಿ ಯುವ ಜನರು ಪಲ್ಲಕ್ಕಿಯಲ್ಲಿ ಬಾಪೂಜಿಯವರ ಭಾವಚಿತ್ರವನ್ನು ಇಟ್ಟು ಊರಿನಾದ್ಯಂತ ಮೆರವಣಿಗೆ ಮತ್ತು ಸಾವಿರಾರು ಮಂದಿಗೆ ಅನ್ನದಾನ ಮಾಡಿಸಿದ್ದರು.
- ಮೈಸೂರು ಸರ್ಕಾರಿ ರೇಷ್ಮೆ ನೇಯ್ಗೆ ಕೆಲಸಗಾರರ ಸಂಘದವರಿAದ ಸಂತಾಪ ಸೂಚಿಸಲಾಯಿತು.
- ಚಾಮರಾಜನಗರದ ದೊಡ್ಡರಾಯನಪೇಟೆಯಲ್ಲಿ ಶ್ರೀ ವೀರಪ್ಪನವರ ನೇತೃತ್ವದಲ್ಲಿ ಭಾರಿ ಸಭೆ ನಡೆಸಲಾಯಿತು.
- ಯಳಂದೂರಿನಲ್ಲಿ ಬಾಪೂಜಿಯವರ ಆತ್ಮಕ್ಕೆ ಶಾಂತಿ ಕೋರಿ "ಹರತಾಳ, ಎಲ್ಲಾ ದೇವಸ್ಥಾನ ಮತ್ತು ಮಸೀದಿಗಳಲ್ಲಿ ವಿಶೇಷ ಪ್ರಾರ್ಥನೆ ಮತ್ತು ಬೈಬಲ್, ಕುರಾನ್ ಮತ್ತು ಗೀತೆಗಳ ಪಠಣೆ ನಡೆಸಿದರು."
- ಕೃಷ್ಣರಾಜನಗರದಲ್ಲಿ ಎಲ್ಲಾ ದೇವಸ್ಥಾನ ಮತ್ತು ಮಸೀದಿಗಳಲ್ಲಿ ವಿಶೇಷ ಪ್ರಾರ್ಥನೆ ಮತ್ತು ಸುಮಾರು ನಾಲ್ಕು ಸಾವಿರ ಮಂದಿಗೆ ಅನ್ನದಾನ ಮಾಡಿಸಲಾಯಿತು.
- ದೇವಾಂಗ ರಿಕ್ರಿಯೇಷನ್ ಕ್ಲಬ್‌ನವರು ಸಾವಿರರು ಮಂದಿಗೆ ಅನ್ನದಾನ ಮಾಡಿಸಿದ್ದರು.
- ಹುಣಸೂರು ತಾಲೂಕು ಗಾವಡೆಗೆರೆಯಲ್ಲಿ ಎನ್.ಆರ್. ಘಾಟ್ಕೆಯವರ ನೇತೃತ್ವದಲ್ಲಿ ವಸ್ತ್ರದಾನ ಮಾಡಲಾಯಿತು.೬
- ಚಲುವಾಂಬ ಆಸ್ಪತ್ರೆ ಕೆಲಸಗಾರರು ಶ್ರೀ ಹೆಚ್.ಕೆ. ಸೀತಾರಾಮಯ್ಯನವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಐದು ನಿಮಿಷಗಳ ಕಾಲ ಮೌನವನ್ನಾಚರಿಸಲಾಯಿತು.
- ಸುತ್ತೂರು ಮಠಾಧೀಶರಾದ ಶ್ರೀ ಶಿವರಾತ್ರೀಶ್ವರ ಸ್ವಾಮಿಗಳು ಉಪವಾಸವನ್ನಾಚರಿಸುವುದರ ಮೂಲಕ ಮಹಾತ್ಮರ ಆತ್ಮಕ್ಕೆ ಶಾಂತಿ ಕೋರಿದರು.
- ವೈಶ್ಯ ಯುವಜನ ಸಂಘದ ಆಶ್ರಯದಲ್ಲಿ ಮೈಸೂರಿನ ಅಶೋಕ ರಸ್ತೆಯಲ್ಲಿ ಶ್ರೀ ಕನ್ಯಾಕಾಪರಮೇಶ್ವರಿ ದೇವಸ್ಥಾನದಲ್ಲಿ ಸಂತಾಪ ಸೂಚಕ ಸಭೆಯನ್ನು ಶ್ರೀ ಪಿ. ಗೋಪಾಲಕೃಷ್ಣ ಶೇಷ್ಠಿರವರ ಅಧ್ಯಕ್ಷತೆಯಲ್ಲಿ ನಡೆಸಲಾಯಿತು.
- ನಂಜನಗೂಡು ಸರ್ಕಾರಿ ಕನ್ನಡ ಮಾಧ್ಯಮ ಶಾಲೆಯಲ್ಲಿ ಶ್ರೀ ಎ.ಪಿ. ವೆಂಕಟರಾಮಯ್ಯನವರ ಅಧ್ಯಕ್ಷತೆಯಲ್ಲಿ ಸಂತಾಪ ಸೂಚಿಸಲಾಯಿತು.
- ಬೆಂಗಳೂರಿನ ನಾಗರಿಕರು ನಗರದಲ್ಲಿ ಶೋಕ ಪ್ರದರ್ಶನವನ್ನು ಟಿ. ಸಿದ್ದಲಿಂಗಯ್ಯನವರ ಅಧ್ಯಕ್ಷತೆಯಲ್ಲಿ ಸಿಲ್ವರ್ ಜ್ಯೂಬಿಲಿ ಪಾರ್ಕಿನಲ್ಲಿ ಭಾರಿ ಸಭೆ ಸೇರಿ ಸಂತಾಪ ಸೂಚಿಸಲಾಯಿತು. ಈ ಸಭೆಯಲ್ಲಿ ಸುಮಾರು ಒಂದು ಲಕ್ಷದ ಐವತ್ತು ಸಾವಿರ ಜನ ಸೇರಿ ಮೆರವಣಿಗೆ ಮಾಡಿ ಸಂತಾಪ ಸೂಚಿಸಿದರು.೭

ಮೈಸೂರು ಸರ್ಕಾರಿ ಗೆಜೆಟ್‌ನಲ್ಲಿ ರಜೆ ಘೋಷಣೆ

1948ರಲ್ಲಿ ಮೈಸೂರು ಸರ್ಕಾರಿ ಗೆಜೆಟ್‌ನಲ್ಲಿ ಮಹಾತ್ಮಾ ಗಾಂಧಿಯವರ ನಿಧನಕ್ಕೆ ಸಂತಾಪ ಸೂಚಿಸುವ ಸಲುವಾಗಿ ಮೈಸೂರು ಸಂಸ್ಥಾನದ ಚೀಫ್ ಸೆಕ್ರೆಟರಿ ಆಫ್ ಗವರ್ನಮೆಂಟ್ ಆಗಿದ್ದ ವಿ. ವೇದವ್ಯಾಸಾಚಾರ್ಯರವರು ನಿಧನದ ಸ್ಮರಣಾರ್ಥವಾಗಿ ೧೩ ದಿನಗಳ ಕಾಲ ಯಾವುದೇ ಸಾರ್ವಜನಿಕ ಕಾರ್ಯಕ್ರಮಗಳು ಹಾಗೂ ಆಚರಣೆಗಳನ್ನು ಮಾಡಬಾರದೆಂದು ಸರ್ಕಾರ ಹೊರಡಿಸಿದ್ದ ಪತ್ರ ಬಹಳ ಗಮನಾರ್ಹವಾಗಿದೆ.

"All Government Offices, courts and Educational institutions in the state will remain closed on Monday the 2nd February 1948, as a mark of respect to the memory of MAHATMA GANDHI.

The Mysore state and Indian Dominion Flags will continue to be flown at half-mast for a period of thirteen days commencing from Friday, the 30th January 1948, and during this period of mourning there will be no functions or social engagements of an official character. "8

ಮತ್ತೆ ೧೯ಳಲ ರ ಫೆಬ್ರವರಿ ಏಳನೇ ತಾರೀಖಿನಂದು ಮಹಾತ್ಮಾ ಗಾಂಧೀಯವರ ಸ್ಮರಣಾರ್ಥ ಮೈಸೂರು ಸರ್ಕಾರಿ ಕಾರ್ಯದರ್ಶಿಯಾಗಿದ್ದ ಕೆ. ತಿಪ್ಪೇರುದ್ರಯ್ಯನವರು "ಎಲ್ಲಾ ಸರ್ಕಾರಿ ಕಛೇರಿಗಳು, ಕೋರ್ಟ್ ಮತ್ತು ಶಿಕ್ಷಣ ಸಂಸ್ಥೆಗಳಿಗೆ ಒಂದು ದಿನ ರಜೆ ನೀಡಿ ಆದೇಶ ಹೊರಿಡಿಸಿದ ಪತ್ರವೂ ಗಮನಾರ್ಹವಾಗಿದೆ."

"All Government Offices, courts and Educational institutions in the state will remain closed on Thursday the 12th February 1948, as a mark of respect to the memory of MAHATMA GANDHI.

The Mysore State and Indian Dominion Flags will continue to be flown at half-mast on all the public Buildings on that day."9

ವಿಶ್ವದ ಪ್ರಮುಖ ಪತ್ರಿಕೆಗಳ ಮುಖಪುಟದ ಹೆಡ್‌ಲೈನ್‌ಗಳು

ವಿಶ್ವದ ಪ್ರಮುಖ ಎಲ್ಲಾ ದಿನಪತ್ರಿಕೆಗಳು ಮಹಾತ್ಮಾ ಗಾಂಧೀಯವರ ನಿಧನದ ಸುದ್ದಿಯನ್ನು ವಿಭಿನ್ನವಾಗಿ ಪ್ರಕಟಿಸಿದ್ದರು. ಅದರಲ್ಲಿ ಕೆಲವು ಪ್ರಮುಖ ಮುಖಪುಟದ ಹೆಡ್‌ಲೈನ್‌ಗಳನ್ನು ಕೆಳಗೆ ತಿಳಿಸಲಾಗಿದೆ. ೧೦

- Hindustan times – "Mahatma Gandhi shot dead. Long live mahatma "
- Dawn – "mahatma Gandhi a martyr to assassin's bullets: hit by four shots at close range: world shocked by news of Delhi outrage: assailant arrested "
- The times of India – "Mahatma Gandhi: assassinated at Delhi. maharishi from Poona fires at point blank range"
- Free press journal – "Mahatma Gandhi is dead. Assassinated at prayer meeting'
- Evening news - "mahatma's last journey"
- The national standard – "the passing of the mahatma "
- Pakistan times – "Gandhi death plunges Lahore in grief "
- The Washington post –"Gandhi assassinated: 15 die in Bombay riot."

- The New York times – “Gandhi is killed by Hindu. India shaken world mourns: is die in rioting in Bombay ”
- The Irish times – “mahatma Gandhi shot dead on way to prayers ”
- The daily telegraph – “assassination of Mr. Gandhi ”
- Herald tribune(new York): “Gandhi is assassinated by Hindu assembly votes gold trading bill”

ಮೈಸೂರಿನಲ್ಲಿ ಸ್ವಾತಂತ್ರ್ಯಪೂರ್ವದಿAದ ಕನ್ನಡದಲ್ಲಿ ಪ್ರಖ್ಯಾತವಾಗಿದ್ದ ಸಾಧ್ವಿ ಪತ್ರಿಕೆಯು ಮಹಾತ್ಮ ಗಾಂಧೀಯವರ ನಿಧನವನ್ನು ಕುರಿತು ೩೧-೦೧-೧೯೪೮ರ ಪತ್ರಿಕೆಯ ಇಡೀ ಮುಖಪುಟದಲ್ಲಿ ಗಾಂಧೀಯವರ ಭಾವಚಿತ್ರವನ್ನು ಪ್ರಕಟಿಸಿದ್ದರು. ಪತ್ರಿಕೆಯಲ್ಲಿ "೧೨೫ ವರ್ಷ ಬದುಕಬೇಕೆಂದಿದ್ದ ಮಹಾತ್ಮರಿಗೆ ಅಪಮೃತ್ಯು ಗುಂಡೇಟಿನಿAದ ಮರಣ" -ಇಡೀ ಪ್ರಪಂಚವೇ ಶೋಕ ಸಾಗರದಲ್ಲಿ ಮುಳುಗಿದೆ. ಈ ದಿನವನ್ನು ದೇವತಾ ಪ್ರಾರ್ಥನೆ ಮತ್ತು ಉಪವಾಸದಲ್ಲಿ ಕಳೆಯಬೇಕು. "ಈ ದಿನ ಸಂಸ್ಥಾನದಲ್ಲೆಲ್ಲ ಸಾರ್ವತ್ರಿಕ ರಜಾ ರಾಜಧಾನಿಯಲ್ಲಿ ಈ ಬೆಳಿಗ್ಗೆ ಮೌನದ ಮೆರವಣಿಗೆ ಸಂಜೆ ಬಹಿರಂಗ ಸಭೆ" ಎಂದು ಪ್ರಕಡಿಸಿದ್ದರು. ಮತ್ತೆ ೩೧-೦೧-೧೯೪೮ರಂದು ಪೂಜ್ಯ ಭಾಪೂಜಿಯವರಿಗೆ ನಿಧನದ ಬಗ್ಗೆ ಸಂತಾಪವನ್ನು ಸೂಚಿಸಲು ನಾಳೆ ದಿನ ಸಾಧ್ವಿ ಪತ್ರಿಕೆಗೆ ರಜಾ ಕೊಡಲಾಗಿದೆ-ವ್ಯವಸ್ಥಾಪಕರು. ಎಂದು ಪ್ರಕಟಿಸಿದ್ದರು.೧೧

References

1. ೧.ಗಾಂಧೀಜಿ ಮತ್ತು ಸ್ವಾತಂತ್ಯ, ಸಂಗ್ರಾಮ -ಪುಟ-೧೨೪ - ಶ್ರೀ ಎನ್.ವಿ. ಶ್ರೀನಿವಾಸರಾವ್
2. ೨.ಗಾಂಧೀಜಿ ಮತ್ತು ಸ್ವಾತಂತ್ಯ, ಸಂಗ್ರಾಮ -ಪುಟ-೧೨೧ - ಶ್ರೀ ಎನ್.ವಿ. ಶ್ರೀನಿವಾಸರಾವ್
3. ೩.ಸಾಧ್ವಿ ಪತ್ರಿಕೆ ಸಂಪುಟ ೦೬, ಶುಕ್ರವಾರ ೧೩-೨-೧೯೪೮ , ಸಂಚಿಕೆ -೧೫೨
4. ೪.ಮೈಸೂರು ಸರ್ಕಾರದ ಮುದ್ರಾಣಾಲಯ ಸೂಪರಿಂಟೆAಡೆAಟ್‌ರವರಿAದ ಮುದ್ರಿಸಲ್ಪಟ್ಟ ದಾಖಲೆ, ಬೆಂಗಳೂರು –ವಿಭಾಗೀಯ ಪತ್ರಾಗಾರ ಇಲಾಖೆ ಮೈಸೂರು ಮತ್ತು ಸಾಧ್ವಿ ಪತ್ರಿಕೆ ಸಂಪುಟ ೦೬, ಶುಕ್ರವಾರ ೧೧-೨-೧೯೪೮ , ಸಂಚಿಕೆ -೧೫೦
5. ೫.ಸಾಧ್ವಿ ಪತ್ರಿಕೆ ಸಂಪುಟ ೦೬, ಗುರುವಾರ ೨೬-೨-೧೯೪೮ , ಸಂಚಿಕೆ -೧೬೫
6. ೬.ಸಾಧ್ವಿ ಪತ್ರಿಕೆ ಸಂಪುಟ ೦೬, ಬುಧವಾರ ೧೮-೨-೧೯೪೮ , ಸಂಚಿಕೆ -೧೫೭
7. ೭.ಸಾಧ್ವಿ ಪತ್ರಿಕೆ ಸಂಪುಟ ೦೬, ಶುಕ್ರವಾರ ೦೮-೨-೧೯೪೮
8. The Mysore Gazette, Banglore, Sunday, February 1.1948. “Printed by the superintendent of the Government Press , Banglore (Reg.no.M.1175)”
9. The Mysore Gazette, Banglore, Saturday, February 1948. “Printed by the superintendent of the Government Press , Banglore (Reg.no.M.1175)”
10. Internet Soures …
11. ಸಾಧ್ವಿ ಪತ್ರಿಕೆ ಸಂಪುಟ ೦೬, ೩೧-೧-೧೯೪೮ , ಸಂಚಿಕೆ -೧೪೦
12. ಮೂಲ ದಾಖಲೆಗಳು ವಿಭಾಗೀಯ ಪತ್ರಾಗಾರ ಕಛೇರಿ.ಮೈಸೂರು